ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಹಾನಗರ ಪಾಲಿಕೆ ಕಛೇರಿಗಳು, ನರಸಿಂಹರಾಜ ಚೌಕ, ಬೆಂಗಳೂರು-560002

ಅಧಿಸೂಚನೆ ಸಂಖ್ಯೆ: ಸ.ಆ.ನೇ&ವಿ/ಪಿಆರ್/ 34/2022-23 ದಿನಾಂಕ: 13/01/2023

# ಅಧಿಸೂಚನೆ

## ಪೌರಕಾರ್ಮಿಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವ ಬಗ್ಗೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣೆ ಹಾಗೂ ವಿವಿಧ ಸ್ವಚ್ಛತಾ ಕಾರ್ಯಗಳ ನಿರ್ವಹಣೆಗಾಗಿ ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಖಾಲಿ ಇರುವ **ಗ್ರೂಪ್ "ಡಿ"** ವೃಂದದ 3673 ಪೌರಕಾರ್ಮಿಕರ ಹುದ್ದೆಗಳನ್ನು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 165 ಬಿಬಿಎಲ್ 2022(ಇ), ದಿನಾಂಕ:23-11-2022 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಪೌರಕಾರ್ಮಿಕರ ನೇಮಕಾತಿ)(ವಿಶೇಷ) ನಿಯಮಗಳು 2022 ರ ಅನ್ವಯ ಭರ್ತಿ ಮಾಡುವ ಸಲುವಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಡಿಯಲ್ಲಿನ ತ್ಯಾಜ್ಯ ನಿರ್ವಹಣೆ ಕಾರ್ಯಗಳಲ್ಲಿ ನೇರಪಾವತಿ ಅಥವಾ ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ (ಪೌರಕಾರ್ಮಿಕರು) ಆಧಾರದ ಮೇಲೆ ಕನಿಷ್ಠ 02 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿರಂತರವಾಗಿ ಸೇವೆಯನ್ನು ಸಲ್ಲಿಸಿರುವ ಹಾಗೂ ಸದರಿ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ (ಅಂದರೆ ದಿನಾಂಕ:23-11-2022) ಕಾರ್ಯ ನಿರ್ವಹಿಸುತ್ತಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ಇಲಾಖೆ ಮತ್ತು ಹುದ್ದೆಯ ಪದನಾಮ | ಸ್ಥಳೀಯ ವೃಂದದ – ಹುದ್ದೆಗಳು (KK) ಕಲ್ಯಾಣ-ಕರ್ನಾಟಕ |
|---|---|---|
| 01 | ಬಿಬಿಎಂಪಿಯ ಘನತ್ಯಾಜ್ಯ ನಿರ್ವಹಣೆ ವಿಭಾಗ ಪೌರಕಾರ್ಮಿಕರು 'ಡಿ' ಗ್ರೂಪ್ | 430 |

### ಸ್ಥಳೀಯ ಮೂಲ ವೃಂದದ ವರ್ಗೀಕೃತ ಮೀಸಲಾತಿ ಹುದ್ದೆಗಳು.

| ಕ್ರ.ಸ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವರ್ಗೀಕರಣ | | | | | | | | | |
|---|---|---|---|---|---|---|---|---|---|---|---|---|
| | | | | ಪ.ಜಾ (17%) | ಪ.ಪಂ (7%) | ಪ್ರ-1 (4%) | ಪ್ರ 2ಎ (15%) | ಪ್ರ 2ಬಿ (4%) | ಪ್ರ 3ಎ (4%) | ಪ್ರ 3ಬಿ (5%) | ಸಾ.ಅ (44%) | ಒಟ್ಟು |
| 01 | ಪೌರಕಾರ್ಮಿಕರು (17000-28950) | 430 | ಇತರೆ | 15 | 06 | 03 | 13 | 03 | 03 | 05 | 37 | 85 |
| | | | ಮಹಿಳೆ | 22 | 09 | 05 | 20 | 05 | 05 | 06 | 57 | 129 |
| | | | ಗ್ರಾಮೀಣ | 19 | 08 | 05 | 16 | 05 | 05 | 05 | 48 | 111 |
| | | | ಅಂಗವಿಕಲ | 04 | 02 | 01 | 04 | 01 | 01 | 01 | 10 | 24 |
| | | | ತೃ.ಲಿಂಗ | - | - | - | - | - | - | - | 01 | 01 |
| | | | ಮಾ.ಸೈ | 07 | 03 | 01 | 06 | 01 | 01 | 02 | 19 | 40 |
| | | | ಕ.ಮಾ.ಅ | 03 | 01 | 01 | 03 | 01 | 01 | 01 | 09 | 20 |
| | | | ಯೋ.ನಿರಾ | 03 | 01 | 01 | 03 | 01 | 01 | 01 | 09 | 20 |
| | | | ಒಟ್ಟು | 73 | 30 | 17 | 65 | 17 | 17 | 21 | 190 | 430 |

3) ಸರ್ಕಾರದ ಅಧಿಸೂಚನೆ ಜಾರಿಯಾದ ದಿನಾಂಕ:23-11-2022 ಕ್ಕೆ ಬಿಬಿಎಂಪಿ ಯಲ್ಲಿ 02 ವರ್ಷಕ್ಕಿಂತ ಕಡಿಮೆ ಇಲ್ಲದಂತೆ ನಿರಂತರವಾಗಿ ಕಾರ್ಯನಿರ್ವಹಿಸಿರಬೇಕು ಹಾಗೂ ಬಿಬಿಎಂಪಿ ಸೇವೆಯಲ್ಲಿ ಮುಂದುವರೆಯುತ್ತಿರಬೇಕು. ನೇರಪಾವತಿ ಅಥವಾ ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ (ಪೌರಕಾರ್ಮಿಕರು) ರವರುಗಳಿಗೆ ಆದ್ಯತೆ ನೀಡಲಾಗುವುದು.

4) ದೈಹಿಕ ದೃಢತೆ ಇರತಕ್ಕದ್ದು (ಸರ್ಕಾರಿ ಆಸ್ಪತ್ರೆಯ ಸಕ್ಷಮ ಪ್ರಾಧಿಕಾರದಿಂದ ವೈದ್ಯಕೀಯ ಪ್ರಮಾಣ ಪತ್ರ ಪಡೆಯತಕ್ಕದ್ದು) (ವಿಕಲ ಚೇತನರಿಗೆ (PH) ಹೊರತುಪಡಿಸಿ).

5) ಕನ್ನಡ ಭಾಷೆ ಮಾತನಾಡಲು ತಿಳಿದಿರಬೇಕು.

6) ಈ ಹುದ್ದೆಗೆ ಯಾವುದೇ ಶೈಕ್ಷಣಿಕ ವಿದ್ಯಾರ್ಹತೆ ಅಗತ್ಯವಿರುವುದಿಲ್ಲ.

**ಬಿ) ಅನರ್ಹತೆ ವಿಧಾನ :-**

1) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗುವುದಿಲ್ಲ.

2) ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರಬಾರದು.

3) ಈಗಾಗಲೇ ಗಂಭೀರ ಪ್ರಕರಣದ ಕಾರಣ ಸೇವೆಯಿಂದ ತೆಗೆದುಹಾಕಿರಬಾರದು.

## 5. ನೇಮಕಾತಿ ವಿಧಾನ:-

1. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 165 ಬಿಬಿಎಲ್ 2022(ಇ) ದಿನಾಂಕ:23-11-2022 ರ ನಿಯಮಗಳನ್ವಯ ಬಿಬಿಎಂಪಿಯಲ್ಲಿ ನೇರಪಾವತಿ ಅಥವಾ ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ (ಪೌರಕಾರ್ಮಿಕರು) ಆಧಾರದಲ್ಲಿ 02 ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ನಿರಂತರವಾಗಿ ಸೇವೆ ಸಲ್ಲಿಸಿರುವ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 165 ಬಿಬಿಎಲ್(ಇ) ರಲ್ಲಿ ತಿಳಿಸಿರುವಂತೆ ದಿನಾಂಕ:23-11-2022 ರಂದು ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ರವರುಗಳಿಗೆ ಆದ್ಯತೆ ನೀಡಲಾಗುವುದು.
2. ನೇಮಕಾತಿಗೆ ಅರ್ಹರಾಗುವ ಅಭ್ಯರ್ಥಿಗಳ ಅರ್ಹತೆಗೆ ಅನುಗುಣವಾಗಿ ಅಂದರೆ ನೇರಪಾವತಿ / ಕ್ಷೇಮಾಭಿವೃದ್ಧಿ / ದಿನಗೂಲಿ ಆಧಾರದ ಮೇಲೆ ಸಲ್ಲಿಸಿದ ಸೇವಾವಧಿಯನ್ನು ಪರಿಗಣಿಸಿ ಚಾಲ್ತಿಯಲ್ಲಿರುವ ಮೀಸಲಾತಿ ನೀತಿಗೊಳಪಟ್ಟು ಅರ್ಹತೆ ಪಟ್ಟಿಯನ್ನು ತಯಾರಿಸಲಾಗುವುದು.
3. ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 165 ಬಿಬಿಎಲ್(ಇ), ದಿನಾಂಕ:23-11-2022 ರಲ್ಲಿ ತಿಳಿಸಿರುವಂತೆ ವೇತನ ಪಡೆದಿರುವ ದಾಖಲಾತಿಗಳ ಆಧಾರದ ಮೇಲೆ ಕಡಿಮೆ ವರ್ಷ ಸೇವೆ ಸಲ್ಲಿಸುತ್ತಿರುವವರಿಗಿಂತ ಹೆಚ್ಚು ವರ್ಷ ಸೇವೆ ಸಲ್ಲಿಸಿದವರನ್ನು ಆದ್ಯತೆಯ ಅನುಸಾರ ಪರಿಗಣಿಸಲಾಗುವುದು.
4. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಪೈಕಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳ ಸೇವಾ ಅವಧಿ ಒಂದೇ ಇದ್ದ ಪಕ್ಷದಲ್ಲಿ, ಅಂತಹ ಅಭ್ಯರ್ಥಿಗಳ ಜೇಷ್ಠತೆಯನ್ನು ಅವರ ವಯಸ್ಸಿಗೆ ಅನುಗುಣವಾಗಿ ಅಂದರೆ ಹೆಚ್ಚು ವಯಸ್ಕರನ್ನು ಕಡಿಮೆ ವಯಸ್ಕರಿಗಿಂತ ಮೇಲೆ ಪರಿಗಣಿಸಲಾಗುವುದು ಹಾಗೂ ಹುಟ್ಟಿದ ದಿನಾಂಕ ಹಾಗೂ ಸೇವಾ ಅವಧಿ ಒಂದೇ ಆಗಿದ್ದಲ್ಲಿ ಲಾಟರಿ ಮೂಲಕ ಆಯ್ಕೆ ಮಾಡಲಾಗುವುದು.
5. ಸಾಮಾನ್ಯ ವರ್ಗ ಮತ್ತು ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಲಭ್ಯವಾಗದೇ ಇದ್ದ ಪಕ್ಷದಲ್ಲಿ ಒಂದು ಬಾರಿ ಮಾತ್ರ ವಿನಾಯಿತಿ ನೀಡಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಪರಿಗಣಿಸಿ ನೇಮಕಾತಿ ಕ್ರಮ ಕೈಗೊಳ್ಳಲಾಗುವುದು.
6. ಮೇಲಿನ ಮಾನದಂಡಗಳನ್ವಯ ಅರ್ಹ ಅಭ್ಯರ್ಥಿಗಳ ಮುಖ್ಯ ಪಟ್ಟಿಯನ್ನು ತಯಾರಿಸಲಾಗುವುದು.
7. ಸರ್ಕಾರದ ಅಧಿಸೂಚನೆಯಲ್ಲಿ ಸೂಚಿಸಿರುವಂತೆ ಮುಖ್ಯ ಪಟ್ಟಿಯಲ್ಲಿ ಇಲ್ಲದ ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯನ್ನು ತಯಾರಿಸಲಾಗುವುದು. ಹೆಚ್ಚುವರಿ ಪಟ್ಟಿಯಲ್ಲಿ ಪ್ರತಿಯೊಂದು ಪ್ರವರ್ಗದ ಮೀಸಲಾತಿ(ಸಮತಲ ಮತ್ತು ಲಂಬವಾದ)ಗೆ ಅನುಗುಣವಾಗಿ ಮುಖ್ಯ ಪಟ್ಟಿಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳ ಶೇಕಡ 20 ರಷ್ಟು ಅಭ್ಯರ್ಥಿಗಳನ್ನು ಗುರುತಿಸಲಾಗುವುದು. ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ಪ್ರತಿಯೊಂದು ಪ್ರವರ್ಗದ ಮೀಸಲಾತಿ (ಸಮತಳ ಮತ್ತು ಲಂಬವಾದ)ಕನಿಷ್ಠ ಒಬ್ಬ ಅಭ್ಯರ್ಥಿ ಇರುವುದನ್ನು ದೃಢೀಕರಿಸಿಕೊಳ್ಳಲಾಗುವುದು.
8. ಅರ್ಹ ಅಭ್ಯರ್ಥಿಗಳ ಅಂತಿಮ ಮುಖ್ಯ ಪಟ್ಟಿಯನ್ನು ಹಾಗೂ ಹೆಚ್ಚುವರಿ ಪಟ್ಟಿಯನ್ನು ಪಾಲಿಕೆಯ ಮುಖ್ಯ ಆಯುಕ್ತರ ಕಛೇರಿಯ ಸೂಚನಾ ಫಲಕದಲ್ಲಿ ಹಾಗೂ ಎಲ್ಲಾ ವಲಯ ಕಛೇರಿಗಳಲ್ಲಿ ಪ್ರಕಟಿಸಲಾಗುವುದು. ಇದಲ್ಲದೆ ಎರಡು ಪಟ್ಟಿಯನ್ನು ಪಾಲಿಕೆಯ ಜಾಲತಾಣದಲ್ಲಿ (WEBSITE) ಪ್ರಕಟಿಸಲಾಗುವುದು.

